ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಖ್ಯ ವಿಚಾರಣೆ ವಾದಿ ಪರ ವಕೀಲರಾದ ಶ್ರೀ ಎಜಿಜಿ ರವರಿಂದ:-

ನಾನು ಈಗ ಹಾಜರುಪಡಿಸಿದ ಪ್ರಮಾಣ ಪತ್ರವನ್ನು ನನ್ನ ಮುಖ್ಯ ವಿಚಾರಣೆಯನ್ನಾಗಿ ಪರಿಗಣಿಸಲು ಕೋರುತ್ತೇನೆ. ಪ್ರಮಾಣ ಪತ್ರದಲ್ಲಿನ ಎಲ್ಲಾ ಅಂಶಗಳು ಸತ್ಯವಾಗಿವೆ ಮತ್ತು ಅದರಲ್ಲಿ ನನ್ನ ಸಹಿ ಇರುತ್ತದೆ ಎಂದು ಪ್ರಮಾಣೀಕರಿಸುತ್ತೇನೆ.

ದಿನಾಂಕ:14.09.1962 ಮತ್ತು 21.02.1963 ರ ಕ್ರಯಪತ್ರಗಳ ಮೂಲ ದಾಖಲೆಗಳನ್ನು ಹಾಜರು ಮಾಡಿದ್ದು ಅವುಗಳನ್ನು ನಿ.ಪಿ.1 ಮತ್ತು ನಿ.ಪಿ.2 ಎಂದು, ಗೋವಿಂದಯ್ಯ ಮತ್ತು ಜಯಮ್ಮ ರವರ ಮರಣ ಪ್ರಮಾಣ ಪತ್ರಗಳನ್ನು ನಿ.ಪಿ.3 ಮತ್ತು 4 ಎಂದು, ಎರಡು ಪಹಣಿ ಪತ್ರಿಕೆಗಳನ್ನು ನಿಪಿ-5 ಮತ್ತು 6 ಎಂದು, ಎರಡು ಎಂ.ಆರ್. ಏಕ್ಸ್‌ಟ್ರಾಕ್ಟ್ ನ್ನು ನಿ.ಪಿ.7 ಮತ್ತು 8 ಎಂದು, ಎರಡು ಇ.ಸಿ. ಗಳನ್ನು ನಿ.ಪಿ.9 ಮತ್ತು 10 ಎಂದು, ಡಿ.ಡಿ.ಎಲ್.ಆರ್. ಮಾಡಿದ ಆದೇಶದ ದೃಢೀಕೃತ ನಕಲನ್ನು ನಿ.ಪಿ.11 ಎಂದು ಗುರುತಿಸಲಾಯಿತು.

ಹೆಚ್ಚಿನ ದಾಖಲೆಗಳನ್ನು ನಿಶಾನೆಗೆ ಒಳಪಡಿಸಲು ವಾದಿ ಪರ ವಕೀಲರು ಸಮಯ ಕೋರಿದ್ದು, ಸಮಯ ನೀಡಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ಕೆ. ಶ್ರೀವಿದ್ಯಾ)
ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಮ್.ಎಫ್.ಸಿ
ರಾಮನಗರ.